**All India Radio: Bangalore**

**National Bulletin In Kannada**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.10.2026 19.35 hrs**

---

ಮುಖ್ಯಾಂಶಗಳು

೧. ತೆರಿಗೆ ಅಧಿಕಾರಿಗಳ ಬಂಧನದ ಅಧಿಕಾರ ರದ್ದುಗೊಳಿಸಿದ ಜಿಎಸ್‌ಟಿ ಮಂಡಳಿ

೨. ಕೆನಡಾ ಲೇಖಕಿ ಆನ್ ಕಾರ್ಸನ್ ಅವರಿಗೆ ಸಾಹಿತ್ಯ ವಿಭಾಗದ ನೊಬೆಲ್ ಪ್ರಶಸ್ತಿ

೩. ವಿಶಾಖಪಟ್ಟಣದಲ್ಲಿ ನವೆಂಬರ್ ೧೨ರಿಂದ ಸಿಐಐ ಪಾಲುದಾರಿಕೆ ಶೃಂಗಸಭೆ

೪. ಗ್ರಾಮೀಣ ಭಾಗದ ಕ್ರಿಕೆಟಿಗರು, ಗಾಯಕರನ್ನು ಗುರುತಿಸಲು ಪ್ರಸಾರ ಭಾರತಿಯಿಂದ ’ಕಿಸಾನ್ ಕ್ರಿಕೆಟ್ ಲೀಗ್’

---

ಜಿಎಸ್‌ಟಿ ಮಂಡಳಿಯು ತೆರಿಗೆ ಅಧಿಕಾರಿಗಳ ಬಂಧನದ ಅಧಿಕಾರವನ್ನು ರದ್ದುಗೊಳಿಸಿದೆ ಮತ್ತು ಕಾನೂನು ಕ್ರಮ ಜರುಗಿಸಲು ಇರುವ ಆರ್ಥಿಕ ಮಿತಿಯನ್ನು ಒಂದು ಕೋಟಿ ರೂಪಾಯಿಗಳಿಂದ ೫ ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದೆ.

ದಂಡ, ಜೈಲು ಶಿಕ್ಷೆ ಅಥವಾ ಇವೆರಡನ್ನೂ ಒಳಗೊಂಡಿರುವ ಶಿಕ್ಷೆಯ ನಿರ್ಧಾರವನ್ನು ಪ್ರತಿ ಪ್ರಕರಣದಲ್ಲೂ ನ್ಯಾಯಾಂಗದ ವಿವೇಚನೆಗೆ ಬಿಡಲಾಗಿದೆ. ತಡವಾಗಿ ರಿಟರ್ನ್ಸ್ ಸಲ್ಲಿಸುವ, ತಪ್ಪು ಮಾಡುವ ಅಥವಾ ಪಾವತಿಯಲ್ಲಿ ವಿಳಂಬ ಮಾಡುವ ತೆರಿಗೆದಾರರು ಬಾಕಿ ವಸೂಲಾತಿ, ಬಡ್ಡಿ ಮತ್ತು ಅದಕ್ಕೆ ಅನುಗುಣವಾದ ದಂಡವನ್ನು ಎದುರಿಸಬೇಕಾಗುತ್ತದೆ.

ನವದೆಹಲಿಯಲ್ಲಿ ಇಂದು ನಡೆದ ಜಿಎಸ್‌ಟಿ ಮಂಡಳಿಯ ಸಭೆಯ ನಂತರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಸಭೆಯಲ್ಲಿ ಯಾವುದೇ ದರ ಬದಲಾವಣೆ ಮಾಡಲಾಗಿಲ್ಲ ಮತ್ತು ದರ ರಚನೆಯು ಈಗ ಅಂತಿಮಗೊಂಡಿದೆ ಎಂದು ತಿಳಿಸಿದರು.

೧೦ ಸಾವಿರ ರೂಪಾಯಿ ಅಥವಾ ಅದಕ್ಕಿಂತ ಕಡಿಮೆ ಮೊತ್ತದ ಪ್ರಕರಣಗಳಿಗೆ ನೋಟಿಸ್‌ಗಳನ್ನು ಜಾರಿಗೊಳಿಸಲಾಗುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

---

ಕೆನಡಾದ ಲೇಖಕಿ ಆನ್ ಕಾರ್ಸನ್ ಅವರು ಸಾಹಿತ್ಯ ವಿಭಾಗದಲ್ಲಿ ೨೦೨೮ನೇ ಸಾಲಿನ ನೊಬೆಲ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಶಾಸ್ತ್ರೀಯ ಸಂಪ್ರದಾಯದೊಂದಿಗೆ ಸೃಜನಶೀಲ ಸಂವಾದ ನಡೆಸುವ ಮೂಲಕ ಸಮಕಾಲೀನ ಸಾಹಿತ್ಯಕ್ಕೆ ಹೊಸ ಸ್ವರೂಪಗಳನ್ನು ನೀಡಿದ ಅವರ ನವೀನ ಸಾಹಿತ್ಯದ ಕೊಡುಗೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಸ್ಟಾಕ್‌ಹೋಮ್‌ನಲ್ಲಿರುವ ಸ್ವೀಡಿಷ್ ಅಕಾಡೆಮಿ ತಿಳಿಸಿದೆ. ಈ ವರ್ಷದ ಪ್ರಶಸ್ತಿ ಮೊತ್ತ ೧೨ ಮಿಲಿಯನ್ ಸ್ವೀಡಿಷ್ ಕ್ರೋನರ್ ಆಗಿದೆ.

---

ಭಾರತೀಯ ವಾಯುಪಡೆಯ ೯೪ನೇ ವಾರ್ಷಿಕೋತ್ಸವವನ್ನು ದೇಶಾದ್ಯಂತ ಇಂದು ಆಚರಿಸಲಾಯಿತು.

ಗಾಜಿಯಾಬಾದ್‌ನ ಹಿಂಡನ್ ವಾಯುನೆಲೆಯಲ್ಲಿ ನಡೆದ ವಾಯುಪಡೆ ದಿನಾಚರಣೆಯಲ್ಲಿ ಭಾರತೀಯ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಮಾತನಾಡಿ, ವಾಯುಪಡೆಯ ನೈಜ ಶಕ್ತಿ ಅತ್ಯಾಧುನಿಕ ಉಪಕರಣಗಳು ಮತ್ತು ತಂತ್ರಜ್ಞಾನದಲ್ಲಷ್ಟೇ ಅಲ್ಲ, ಯೋಧರಲ್ಲಿದೆ ಎಂದು ಹೇಳಿದ್ದಾರೆ.

ಆಪರೇಷನ್ ಸಿಂದೂರ ಸಂದರ್ಭದಲ್ಲಿ ವಾಯುಪಡೆ ನಡೆಸಿದ ಯುದ್ಧ ಕಾರ್ಯಾಚರಣೆಗಳನ್ನು ಸ್ಮರಿಸಿದ ಅವರು, ಆ ಕಾರ್ಯಾಚರಣೆಯ ವೇಳೆ ಭಾರತೀಯ ವಾಯುಪಡೆಯ ಸಾಮರ್ಥ್ಯ ಹಾಗೂ ಪರಿಣಾಮಕಾರಿ ವಾಯು ರಕ್ಷಣಾ ಕಾರ್ಯಾಚರಣೆಗಳನ್ನು ದೇಶ ನೇರವಾಗಿ ಕಂಡಿದೆ ಎಂದರು.

---

ಭಾರತ ಕಳೆದ ವರ್ಷ ೮೬೩ ಶತಕೋಟಿ ಡಾಲರ್ ಮೌಲ್ಯದ ರಫ್ತು ದಾಖಲಿಸಿದೆ ಮತ್ತು ಈ ವರ್ಷ ಒಂದು ಟ್ರಿಲಿಯನ್ ಡಾಲರ್ ಮೌಲ್ಯದ ರಫ್ತು ಗುರಿಯನ್ನು ಹೊಂದಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆದ ೩೧ನೇ ಸಿಐಐ ಪಾಲುದಾರಿಕೆ ಶೃಂಗಸಭೆಯ ಪೂರ್ವಭಾವಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಈ ಶೃಂಗಸಭೆಯು ಮುಂದಿನ ತಿಂಗಳ ೧೨ ಮತ್ತು ೧೩ ರಂದು ವಿಶಾಖಪಟ್ಟಣದಲ್ಲಿ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಜಾಗತಿಕ ಆರ್ಥಿಕತೆಯು ಏರಿಳಿತಗಳಿಗೆ ಅಥವಾ ಆಘಾತಗಳಿಗೆ ಒಳಗಾಗುವ ಸ್ಥಿತಿಯಲ್ಲಿರುವ ಮತ್ತು ಜಾಗತಿಕ ಬೆಳವಣಿಗೆಯು ಶೇಕಡಾ ೩ ಕ್ಕಿಂತ ಕಡಿಮೆಯಾಗುವ ನಿರೀಕ್ಷೆಯಿರುವ

ಸಂದರ್ಭದಲ್ಲೂ, ಭಾರತ, ವರ್ಷದಲ್ಲಿ ಸುಮಾರು ಶೇಕಡಾ ೧೯ ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ ಎಂದು ಹೇಳಿದರು.

ಪ್ರಸ್ತುತ ಸುಮಾರು ನಾಲ್ಕು ಟ್ರಿಲಿಯನ್ ಡಾಲರ್ ಇರುವ ಭಾರತದ ಆರ್ಥಿಕತೆಯು, ೨೦೪೭ ರ ವೇಳೆಗೆ ೩೦ ಟ್ರಿಲಿಯನ್ ಡಾಲರ್‌ಗೆ ಬೆಳೆಯುವ ಸಾಮರ್ಥ್ಯ ಹೊಂದಿದೆ ಎಂದು ಸಚಿವ ಪಿಯೂಷ್ ಗೋಯಲ್ ತಿಳಿಸಿದರು.

———————————

ಕೃತಕ ಬುದ್ಧಿಮತ್ತೆಯ ಭವಿಷ್ಯದ ನಿಯಂತ್ರಣಕ್ಕೆ ಸಂಬಂಧಿಸಿದ ಸಮಾಲೋಚನಾ ಪತ್ರವೊಂದನ್ನು ಮುಂದಿನ ಒಂದು ತಿಂಗಳೊಳಗೆ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ನವದೆಹಲಿಯಲ್ಲಿಂದು 'ವಿಶ್ವ ಅಭಿವೃದ್ಧಿ ವರದಿ ೨೦೨೯' ಬಿಡುಗಡೆ ಮಾಡಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಸ್ತಾವಿತ ಸಮಾಲೋಚನಾ ಪತ್ರವು ಎಐ ಸುರಕ್ಷತೆ, ಸೈಬರ್ ಭದ್ರತೆ, ಅದರ ಪ್ರಯೋಜನಗಳು ಮತ್ತು ಸಂಭಾವ್ಯ ಅಪಾಯಗಳ ಮೇಲೆ ಗಮನಹರಿಸಲಿದೆ.

'ಡೀಪ್‌ಫೇಕ್' ನಂತಹ ಹಾನಿಕಾರಕ ಅಂಶಗಳಿಂದ ಜನರನ್ನು ರಕ್ಷಿಸುವ ಜೊತೆಗೆ, ಎಐ ಪ್ರಯೋಜನಗಳು ಸಮಾಜದ ಎಲ್ಲಾ ವರ್ಗಗಳಿಗೂ ತಲುಪುವುದನ್ನು ಖಚಿತಪಡಿಸಿಕೊಳ್ಳುವ ಅಗತ್ಯವನ್ನೂ ಇದು ಪರಿಹರಿಸಲಿದೆ ಎಂದು ಅವರು ತಿಳಿಸಿದರು.

ವರದಿಯ ಕುರಿತು ಮಾತನಾಡಿದ ಸಚಿವ ಅಶ್ವಿನಿ ವೈಷ್ಣವ್, ತಂತ್ರಜ್ಞಾನದಿಂದ ಸಾಂಪ್ರದಾಯಿಕವಾಗಿ ವಂಚಿತವಾಗಿರುವ ಸಮಾಜದ ವರ್ಗಗಳು ಕೂಡ ಕೃತಕ ಬುದ್ಧಿಮತ್ತೆಯಿಂದ ಪ್ರಯೋಜನ ಪಡೆಯುವುದನ್ನು ಖಚಿತಪಡಿಸಿಕೊಳ್ಳುವ ಮಾರ್ಗಗಳನ್ನು ಕಂಡುಕೊಳ್ಳಲು ವಿಶ್ವ ಬ್ಯಾಂಕ್‌ನ ಸಹಯೋಗದೊಂದಿಗೆ ವ್ಯಾಪಕ ಅಧ್ಯಯನ ಕೈಗೊಳ್ಳಲಾಗಿದೆ. ಕೃಷಿ, ಆರೋಗ್ಯ ಮತ್ತು ಶಿಕ್ಷಣದಂತಹ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆಯ ವ್ಯಾಪಕ ಬಳಕೆಯು ಸಮಾಜಕ್ಕೆ ಈ ತಂತ್ರಜ್ಞಾನದಿಂದ ಹೆಚ್ಚಿನ ಪ್ರಯೋಜನಗಳನ್ನು ಪಡೆಯಲು ಸಹಾಯ ಮಾಡುತ್ತದೆ ಎಂದು ಹೇಳಿದರು.

———————————

ಪ್ರಸಾರ ಭಾರತಿ ಮತ್ತು ಇನ್-ಡಾಟ್ ಸ್ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಇಂದು 'ಕಿಸಾನ್ ಕ್ರಿಕೆಟ್ ಲೀಗ್' ಅನ್ನು ಪ್ರಾರಂಭಿಸುವುದಾಗಿ ಘೋಷಿಸಿವೆ.

ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ  ಮೊದಲ ಉಪಕ್ರಮ ಇದಾಗಿದೆ. ಕೆಸಿಎಲ್ - ರಾಷ್ಟ್ರೀಯ ಕ್ರೀಡೆ ಮತ್ತು ಪ್ರತಿಭೆಯನ್ನು ಗುರುತಿಸುವ ವೇದಿಕೆಯಾಗಿದೆ. ದೇಶದ ಗ್ರಾಮೀಣ ಭಾಗಗಳಿಂದ ಕ್ರಿಕೆಟಿಗರು ಮತ್ತು ಗಾಯಕರನ್ನು ಗುರುತಿಸಿ, ಅವರಿಗೆ ಸೂಕ್ತ ವೇದಿಕೆ ಒದಗಿಸುವ ಗುರಿ ಹೊಂದಿದೆ. ಈ ಲೀಗ್ ಮುಂದಿನ ವರ್ಷದ ಫೆಬ್ರವರಿಯಲ್ಲಿ ನಡೆಯಲಿದ್ದು, ಇದರಲ್ಲಿ ಭಾಗವಹಿಸಲು ನೋಂದಣಿ ಪ್ರಕ್ರಿಯೆಯು ಮುಂದಿನ ೨ ರಿಂದ ೩ ವಾರಗಳಲ್ಲಿ ಪ್ರಾರಂಭವಾಗಲಿದೆ.

ಈ ಕ್ರಿಕೆಟ್ ಲೀಗ್ ೧೫ ಓವರ್‌ಗಳ 'ವೈಟ್ ಬಾಲ್' ವೃತ್ತಿಪರ ಕ್ರಿಕೆಟ್ ಮಾದರಿಯನ್ನು ಒಳಗೊಂಡಿರುತ್ತದೆ. ಲೀಗ್‌ನ ಮೊದಲ ಸೀಸನ್‌ನಲ್ಲಿ ಒಟ್ಟು ೪೫ ಪಂದ್ಯಗಳನ್ನು ಆಡಲಾಗುತ್ತದೆ. ದೇಶಾದ್ಯಂತ ಆಯ್ಕೆಯಾದ ಪ್ರತಿಭೆಗಳ ಗುಂಪಿನಲ್ಲಿ ೭ ತಂಡಗಳು, ೧೪೦ ಕ್ರಿಕೆಟಿಗರು ಮತ್ತು ೩೦ ಗಾಯಕರು ಇರುತ್ತಾರೆ.

ಈ ಕುರಿತು ಆಕಾಶವಾಣಿಯೊಂದಿಗೆ ಮಾತನಾಡಿದ ಕಿಸಾನ್ ಕ್ರಿಕೆಟ್ ಲೀಗ್‌ನ ಸ್ಥಾಪಕ ಮತ್ತು ಸಿಇಓ ಅತುಲ್ ಪಾಂಡೆ, ಪ್ರಸಾರ ಭಾರತಿ, ಲೈವ್ ಪಂದ್ಯಗಳನ್ನು ವೀಕ್ಷಿಸಲು ಯಾವುದೇ ಚಂದಾದಾರಿಕೆಯ ಅಗತ್ಯವಿಲ್ಲದೆ, ಜನರಿಗೆ ಸೇವೆ ಸಲ್ಲಿಸುತ್ತದೆ. 'ವೇವ್ಸ್' ವೇದಿಕೆಯು ಲೈವ್ ಕ್ರೀಡೆಗಳು ಮತ್ತು ಗಾಯನ ಸ್ಪರ್ಧೆಗಳ ಜೊತೆಗೆ, ಭಾಗವಹಿಸುವ ಕ್ರಿಕೆಟಿಗರು ಮತ್ತು ಗಾಯಕರ ವಿಶೇಷ ಜೀವನಚಿತ್ರಣಗಳನ್ನು ಒಳಗೊಂಡಿರುವ ಆರೋಗ್ಯಕರ ಹಾಗೂ ಕುಟುಂಬ-ಕೇಂದ್ರಿತ ಮನರಂಜನೆಯನ್ನು ಒದಗಿಸಲಿದೆ ಎಂದು ತಿಳಿಸಿದರು.

---

'ಜನ ಸೇವೆಯಿಂದ ದೇಶ ಸೇವೆ' ಎಂಬ ಮಂತ್ರದಡಿ ಹಾಗೂ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ ಕೂಡಿರುವ ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ.

ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ 'ಬೇವು ಲೇಪಿತ ಯೂರಿಯಾ, ೨೦೧೫ ಕುರಿತ ಒಂದು ವರದಿ ಇಲ್ಲಿದೆ.

೨೦೧೫ರ ಸೆಪ್ಟೆಂಬರ್‌ನಲ್ಲಿ ಭಾರತದಲ್ಲಿ ಉತ್ಪಾದನೆಯಾಗುವ ಎಲ್ಲಾ ಯೂರಿಯಾಗೆ ಬೇವಿನ ಲೇಪನವನ್ನು ಕಡ್ಡಾಯಗೊಳಿಸಿದ ಸರ್ಕಾರ, ಅದೇ ವರ್ಷದ ಡಿಸೆಂಬರ್‌ನಲ್ಲಿ ಆ ನಿಯಮವನ್ನು ಆಮದು ಮಾಡಿಕೊಂಡ ಯೂರಿಯಾಗೂ ವಿಸ್ತರಿಸಿತು.

ಇದರಿಂದಾಗಿ ದೀರ್ಘಕಾಲದಿಂದ ಅತ್ಯಂತ ದುಬಾರಿಯಾಗಿದ್ದ ಯೂರಿಯಾ ಸಮಸ್ಯೆಗೆ ಪರಿಹಾರ ಸಿಕ್ಕಿತು. ರೈತರಿಗೆ ಮೂಲ ಬೆಲೆಯ ಅತ್ಯಲ್ಪ ಭಾಗದಷ್ಟು ದರದಲ್ಲಿ ಮಾರಾಟವಾಗುತ್ತಿದ್ದ ಯೂರಿಯಾವನ್ನು ಕೈಗಾರಿಕೆಗಳಿಗೆ ಅಕ್ರಮವಾಗಿ ತಲುಪಿಸಲಾಗುತ್ತಿತ್ತು. ಇದರಿಂದಾಗಿ ಯೂರಿಯಾ ಮೇಲಿನ ಸಬ್ಸಿಡಿಯು ಖಾಸಗಿ ಲಾಭವಾಗಿ ಪರಿವರ್ತನೆಗೊಳ್ಳುತ್ತಿತ್ತು. ಹಾಗಾಗಿ ರೈತರಿಗೆ ಸಿಗಬೇಕಾದ ಪ್ರಮಾಣದಲ್ಲಿ ಯೂರಿಯಾ ಲಭ್ಯವಾಗುತ್ತಿರಲಿಲ್ಲ.

ಯೂರಿಯಾ ಹರಳುಗಳಿಗೆ ಬೇವಿನ ಲೇಪನ ಮಾಡುವುದರಿಂದ, ಖರೀದಿದಾರರಿಗೆ ಆ ಉತ್ಪನ್ನವು ನಿಷ್ಪ್ರಯೋಜಕವಾಯಿತು. ಆದರೆ ಕೃಷಿ ಭೂಮಿಗೆ ಅದು ಹೆಚ್ಚು ಉಪಯುಕ್ತವಾಯಿತು. ಏಕೆಂದರೆ, ಬೇವಿನ ಲೇಪನವು ಸಾರಜನಕದ ಬಿಡುಗಡೆಯನ್ನು ನಿಧಾನಗೊಳಿಸುತ್ತದೆ ಮತ್ತು ಸಸ್ಯವು ವಾಸ್ತವವಾಗಿ ಹೀರಿಕೊಳ್ಳುವ ಪ್ರಮಾಣವನ್ನು ಹೆಚ್ಚಿಸುತ್ತದೆ.

ಸರ್ಕಾರದ ಈ ನಿಲುವಿನಿಂದಾಗಿ ಯೂರಿಯಾದ ಅಕ್ರಮ ಬಳಕೆಯು ಅತ್ಯಲ್ಪ ಮಟ್ಟಕ್ಕೆ ಕುಸಿಯಿತು. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಸುಮಾರು ೧೦ ಸಾವಿರ ಕೋಟಿ ರೂಪಾಯಿಗಳ ಉಳಿತಾಯವಾಗಿದೆ ಎಂದು ಅಂದಾಜಿಸಲಾಗಿದೆ.

---

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್, ಆಸ್ಟ್ರೇಲಿಯಾದ ಹವಾಮಾನ ಬದಲಾವಣೆ ಮತ್ತು ಇಂಧನ ಸಚಿವ ಹಾಗೂ ಕಾಪ್-೩೧ ಮಾತುಕತೆಗಳ ಅಧ್ಯಕ್ಷ ಕ್ರಿಸ್ ಬೋವೆನ್ ಅವರೊಂದಿಗೆ ಫಿಜಿಯಲ್ಲಿ ಸಭೆ ನಡೆಸಿದರು.

ಈ ವೇಳೆ ಮುಂಬರುವ ಕಾಪ್-೩೧ ರ ಸಮ್ಮೇಳನದ ಆದ್ಯತಾ ವಿಷಯಗಳ ಕುರಿತು ಉಭಯ ನಾಯಕರು ಚರ್ಚಿಸಿದರು.

ಸಮತೋಲಿತ ಹಾಗೂ ಮಹತ್ವಾಕಾಂಕ್ಷೆಯ ಫಲಿತಾಂಶ ಸಾಧಿಸುವ ನಿಟ್ಟಿನಲ್ಲಿ ರಚನಾತ್ಮಕ ಧೋರಣೆ ಅನುಸರಿಸಲು ಮತ್ತು ಕಾಪ್-೩೧ರ ಮಾತುಕತೆಗಳ ಅಧ್ಯಕ್ಷರೊಂದಿಗೆ ಸಹಕರಿಸಲು ಭಾರತದ ಬದ್ಧತೆಯನ್ನು ಸಚಿವ ಭೂಪೇಂದರ್ ಯಾದವ್ ಪುನರುಚ್ಚರಿಸಿದರು.

---

ಭಯೋತ್ಪಾದನೆ ವಿಚಾರದಲ್ಲಿ ಪಾಕಿಸ್ತಾನ ದ್ವಂದ್ವ ನಿಲುವು ತಾಳುತ್ತಿದೆ ಎಂದು ಭಾರತ ಆರೋಪಿಸಿದೆ.

ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮಸೂದ್ ಅಜರ್ ಬಗ್ಗೆ ಮಾಹಿತಿ ನೀಡುವವರಿಗೆ ಬಹುಮಾನ ಘೋಷಿಸುವ ಮೂಲಕ ಭಯೋತ್ಪಾದಕ ಸಂಘಟನೆಗಳಿಗೆ ನೀಡುತ್ತಿರುವ ಬೆಂಬಲವನ್ನು ಪಾಕಿಸ್ತಾನ

ಮರೆಮಾಚಲು ಪ್ರಯತ್ನಿಸುತ್ತಿದೆ.  ೯/೧೧, ೨೬/೧೧ ಮತ್ತು ಪಹಲ್ಗಾಮ್ ದಾಳಿಗಳನ್ನು ಜಗತ್ತು ಮರೆತಿಲ್ಲ ಎಂದು ಭಾರತ ಹೇಳಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಭಾರತದ ಕಾರ್ಯದರ್ಶಿ ರಘು ಪುರಿ, ಕೇವಲ ಘೋಷಣೆಗಳಿಂದ ಭಯೋತ್ಪಾದನೆ ನಿರ್ಮೂಲನೆಯಾಗುವುದಿಲ್ಲ. ಭಯೋತ್ಪಾದಕರು ಮತ್ತು ಅವರಿಗೆ ಹಣಕಾಸು ಒದಗಿಸುವವರು ಹಾಗೂ ಪ್ರಾಯೋಜಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

____________________

ಸೌದಿ ಅರೇಬಿಯಾದ ರಿಯಾದ್‌ನ ಅಭಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಕಿಂಗ್ ಖಾಲಿದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಗುರಿಯಾಗಿಸಿಕೊಂಡು ಕಳೆದ ಕೆಲವು ದಿನಗಳಲ್ಲಿ ನಡೆದ ದಾಳಿಗಳನ್ನು ಭಾರತ ಖಂಡಿಸಿದೆ.

ಈ ದಾಳಿಗಳಲ್ಲಿ ನಾಗರಿಕರು ಮೃತಪಟ್ಟಿದ್ದಾರೆ ಮತ್ತು ಗಾಯಗೊಂಡಿದ್ದಾರೆ. ದಾಳಿಗಳಲ್ಲಿ ನಾಗರಿಕ ಮೂಲಸೌಕರ್ಯಗಳನ್ನು ಗುರಿಯಾಗಿಸುವುದು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ಭಾರತ, ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ. ಅಲ್ಲದೆ, ಸೌದಿ ಅರೇಬಿಯಾದ ಜನತೆ ಮತ್ತು ಸರ್ಕಾರದ ಬೆಂಬಲಕ್ಕೆ ಭಾರತ ನಿಂತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

__________ ಮುಕ್ತಾಯ __________